

ಅಮೃತವನ್ನು ಪಡೆಯಲಿಕ್ಕಾಗಿ ದೇವ ದಾನವರು ಕಡಲನ್ನು ಕಡೆದ ಕಥೆ 'ಮಾಹಿತಿ– ತಂತ್ರಜ್ಞಾನ' ಯುಗದಲ್ಲಿ ಮರುಕಳಿಸಿದಂತಿದೆ. ಪುರಾಣದ ಕಥೆಯಲ್ಲಿ ವಿಷ್ಣು ಮೋಹಿನಿಯ ರೂಪದಲ್ಲಿ ರಕ್ಕಸರನ್ನು ವಂಚಿಸಿದನಷ್ಟೆ. ಈ ಕಾಲದಲ್ಲಿ ಮೋಹಿನಿಯರ ದಂಡೇ ಜನಮಾನಸದತ್ತ ಸಮ್ಮೋಹನದ ಗಾಳ ಎಸೆದಿದೆ. ಈ ಮೋಹಿನಿಯರು ಅಡುಗೆ ಕೋಣೆ, ಪಾಯಖಾನೆ, ಮಲಗುವ ಕೋಣೆ ಸೇರಿದಂತೆ ಮನೆಯ ಮೂಲೆಮೂಲೆಗಳಲ್ಲೂ ತಮ್ಮಿರುವನ್ನು ಪ್ರದರ್ಶಿಸುತ್ತಿದ್ದಾರೆ. ಆಡುವ ಮಗು ಮೋಹಿನಿಯ ಮಡಿಲಿನಲ್ಲಿ ಅರೆನಿಮೀಲಿತವಾಗಿದೆ. ಹರೆಯದ ದಂಪತಿಯ ನಡುವೆ ಮೂರನೇ ವ್ಯಕ್ತಿಯ ರೂಪದಲ್ಲಿ ಮೋಹಿನಿ ಕಾಣಿಸಿಕೊಂಡಿದ್ದಾಳೆ. ಅಂದ ಹಾಗೆ, ಆಧುನಿಕ ಕಾಲದ ಈ ಮೋಹಿನಿಗೆ– ಮೊಬೈಲ್, ಐಪಾಡ್, ಡೆಸ್ಕ್‌ಟಾಪ್, ಲ್ಯಾಪ್‌ಟಾಪ್, ಕಿಂಡಲ್... ಹೀಗೆ ಹತ್ತಾರು ಹೆಸರು. ಈ ದಶಾವತಾರಿಯನ್ನು ಮುದ್ದಾಗಿ, ಮೊಟಕಾಗಿ ಹೆಸರಿಸುವುದಾದರೆ 'ಗ್ಯಾಜೆಟ್' ಎನ್ನಬಹುದು.

ಸಮುದ್ರ ಮಥನದ ಮೋಹಿನಿ ದಾನವರಿಗೆ ಅಮೃತ ನೀಡದೆ ವಂಚಿಸಿದಳು; ಬದಲಿಗೆ ವಿಷವನ್ನೇನೂ ಹಂಚಲಿಲ್ಲ. ಆದರೆ, ಈ ಕಾಲದ 'ಗ್ಯಾಜೆಟ್ ಮೋಹಿನಿ' ಅಮೃತದ ಜೊತೆ ಜೊತೆಗೆ ಹಾಲಾಹಾಲವನ್ನೂ ಉಣಿಸುತ್ತಿದ್ದಾಳೆ. ವಿಷವನ್ನು ಉಂಡ ನಾವೆಲ್ಲರೂ ಈಗ ನಂಜುಂಡರೇ! ವಿಪರ್ಯಾಸ ಎಂದರೆ, ಮೋಹಿನಿಯ ತೆಕ್ಕೆಯಲ್ಲಿರುವ ನಮಗೆ, ಆ ವಿಷಕನ್ನಿಕೆ ಸಹ್ಯ ಎನ್ನಿಸುತ್ತಿರುವುದು!

'ಗ್ಯಾಜೆಟ್ ಮೋಹಿನಿ' ವಿಲಾಸ ಮತ್ತು ವಿಶ್ವರೂಪ ನಮ್ಮ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಮರೆಸುವಷ್ಟು ಪ್ರಭಾವಶಾಲಿ ಆಗಿದೆ. ನಮ್ಮ ಪೂರ್ವಿಕರ ಬದುಕಿನ ರೀತಿಯನ್ನು ನೆನಪಿಸಿಕೊಳ್ಳಿ. ವಿವೇಕ ತಲೆಯಲ್ಲಿ, ಭಾವನೆ ಹೃದಯದಲ್ಲಿ ಹಾಗೂ ವಾಂಛೆ ಎನ್ನುವುದು ಕಣ್ಣು ಮತ್ತು ಮತ್ತೆಲ್ಲೋ ಅಭಿವ್ಯಕ್ತಿಗೊಳ್ಳುವುದು ಅವರ ಪಾಲಿಗೆ ಮಾನವ ಸಹಜ (ಪ್ರಕೃತಿ ಸಹಜ) ಪ್ರಕ್ರಿಯೆಯಾಗಿತ್ತು. ಕಾಲದ ವೈಪರೀತ್ಯದ ಪರಿಣಾಮ ಎನ್ನುವಂತೆ, ವಿವೇಕ – ವಾಂಛೆ – ಭಾವನೆಗಳು ಬೆರಳ ತುದಿಗೆ ಬಂದು ಏಕತ್ರವಾಗಿಬಿಟ್ಟಿವೆ. ಮೂರಂಗುಲದ ಬೆರಳು ಗ್ಯಾಜೆಟ್‌ಗಳ ಮೈ ಸೋಕಿ, ಐದಾರಡಿ ಉದ್ದದ ಮನುಷ್ಯನನ್ನು ಸಂಭಾಳಿಸುತ್ತಿದೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎನ್ನುವ ಪುರಂದರ ದಾಸರ ಕೀರ್ತನೆಯನ್ನು, 'ಗ್ಯಾಜೆಟ್ ಗುಲಾಮನಾಗುವ ತನಕ...' ಎಂದು ಬದಲಿಸಿಕೊಳ್ಳುವ ಸಂದರ್ಭ ಇಂದಿನದು.

## ಸುಪ್ರಭಾತದಿಂದ ಲಾಲಿಯವರೆಗೆ..

ಗ್ಯಾಜೆಟ್‌ಗಳ ಮೇಲಿನ ನಮ್ಮ ಅವಲಂಬನೆ ಬೆಳಗಿನ ಸುಪ್ರಭಾತದಿಂದ ಇರುಳು ನಿದ್ದೆಗೆ ಜಾರುವ ತನಕ ಆವರಿಸಿಕೊಂಡಿದೆ. ಸುಮ್ಮನೆ ಒಂದು ದಿನದ ಆಗುಹೋಗುಗಳನ್ನು ನೆನಪಿಸಿಕೊಳ್ಳಿ. ಅಮ್ಮನ ಪ್ರೀತಿಯ ಗದರಿಕೆಯೋ ಸಂಗಾತಿಯ ಸಿಹಿಮುತ್ತೋ ನಮ್ಮ ಪಾಲಿಗೆ ಸುಪ್ರಭಾತವಾಗುತ್ತಿಲ್ಲ. ಅಜ್ಜಿ ಕಥೆಯ ಕೋಳಿ ಅಥವಾ ಕಾಗೆಯ 'ಕಾ ಕಾ' ಧ್ವನಿ ಕೂಡ ನಮಗೆ ಅಲಾರಾಂ ಆಗಿ ಪರಿಣಮಿಸುತ್ತಿಲ್ಲ. ಬದಲಿಗೆ, ಮೊಬೈಲ್ ಫೋನಿನ ಅಲಾರಾಂ 'ಇದು ಏಳುವ ಸಮಯ' ಎಂದು ನಮ್ಮನ್ನು ತಟ್ಟಿ ಎಚ್ಚರಿಸುತ್ತಿದೆ. ಸರಿ, ಹಾಸಿಗೆ ಬಿಟ್ಟಾಯಿತು. ಮನೆಮಂದಿಯೊಂದಿಗೆ ಕಾಫಿ ಸವಿಯುತ್ತ ಉಭಶುಭ ಮಾತನಾಡಿಕೊಳ್ಳಲು ಬೆಳಗಿಗಿಂಥ ಪ್ರಶಸ್ತ ಸಮಯ ಬೇರೆ ಯಾವುದಿದೆ? ಉಹುಂ, ಉಭಯ ಕುಶಲೋಪರಿಗೆ ಯಾರಿಗಿದೆ ಸಮಯ? ಮೊಬೈಲ್ ಪರದೆಯ ಮೇಲೆ 'ಫೇಸ್‌ಬುಕ್' ಪುಟ ತೆರೆದರೆ, ಅಲ್ಲಿ 'ಫ್ರೆಂಡ್ಸ್' ಹಾಯ್ ಬಾಯ್ ಎನ್ನುತ್ತಿರುತ್ತಾರೆ. ಅಂದು ಹುಟ್ಟುಹಬ್ಬ ಇರುವ ಗೆಳೆಯ ಗೆಳತಿಯರಿಗೆ ಶುಭಾಶಯ ಬೇರೆ ಹೇಳಬೇಕಿದೆ, ಮೊಬೈಲ್‌ನಲ್ಲೇ ಹೂಗುಚ್ಛ ಕಳುಹಿಸಬೇಕಿದೆ. ಲೋಕದ ಗಹನ ವಿಚಾರದ ಬಗ್ಗೆ ಯಾರೋ ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಬೇಕಿದೆ? ಹೀಗೆ, 'ಸಾಮಾಜಿಕ ಜವಾಬ್ದಾರಿ'ಯನ್ನು ಪೂರೈಸುವ ವೇಳೆಗೆ, ಕೆಲಸಕ್ಕೆ ಹೊರಡುವ ಸಮಯ ಸನ್ನಿಹಿತವಾಗಿರುತ್ತದೆ.

ನೀವು ಈ ದಿನ ಯಾರನ್ನೆಲ್ಲ ಭೇಟಿಯಾಗಲಿದ್ದೀರಿ, ಏನೆಲ್ಲ ಕೆಲಸ ಮಾಡಲಿದ್ದೀರಿ, ಮಧ್ಯಾಹ್ನದ ಊಟ ಯಾರೊಂದಿಗೆ, ಸಂಜೆಯ ಚಹಾ ಯಾರೊಂದಿಗೆ... ಇಡೀ ದಿನದ ಟೈಂ ಟೇಬಲ್ ಮೊಬೈಲ್‌ನಲ್ಲೇ ಇದೆ.

'ವಿರಹ'ದ ಕಡುತೀವ್ರತೆಗೆ ಅತ್ಯುತ್ತಮ ಉದಾಹರಣೆ–

### ಸ್ವಾತಂತ್ರ್ಯ ಮತ್ತು ಗುಲಾಮಗಿರಿ

ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹೆಚ್ಚು ತೊಡಗಿಕೊಳ್ಳುವವರಿಗೆ, ಆ ಮೂಲಕ ಸ್ವಾತಂತ್ರ್ಯದ ಆಡುಂಬೊಲದಲ್ಲಿ ತಾವು ವಿಹರಿಸುತ್ತಿರುವಂತೆ ಅನ್ನಿಸಿದರೆ ಆಶ್ಚರ್ಯವೇನೂ ಇಲ್ಲ. ಸಾಮಾಜಿಕ ಜಾಲತಾಣಗಳಂತೂ ಬಳಕೆದಾರರಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಒದಗಿಸಿ ಕೊಡುತ್ತವೆ. ನಾವು ದಿನನಿತ್ಯ ಒಡನಾಡುವ ಸಮಾಜದಲ್ಲಿ ಸಾಧ್ಯವಾಗದ ಸಾಹಸಗಳ ಅಭಿವ್ಯಕ್ತಿಗೆ ಸಾಮಾಜಿಕ ತಾಲತಾಣಗಳು ವೇದಿಕೆಯಾಗುತ್ತವೆ. ಆ ಕಾರಣದಿಂದಲೇ ಅನೇಕರು ನಿಯಂತ್ರಣ ಮೀರಿ ಮಾತನಾಡುವುದು, ತಮ್ಮ ವಿಕಾರಗಳನ್ನು ದಾಖಲಿಸಲು ಸಾಮಾಜಿಕ ಜಾಲತಾಣಗಳು ಬಳಕೆಯಾಗುತ್ತವೆ.

ವ್ಯಕ್ತಿಗತ ಕೀಳರಿಮೆಯನ್ನು ಮೀರಿ, ಆತ್ಮವಿಶ್ವಾಸ ಹೊಂದಲು ಕೂಡ ಅಂತರ್ಜಾಲದೊಂದಿಗಿನ ಒಡನಾಟ ಅವಕಾಶ ಕಲ್ಪಿಸುತ್ತದೆ. ಹೊಸ ಸ್ನೇಹಿತರನ್ನು ಗಳಿಸಲು, ಹೊಸ ವಿಷಯಗಳನ್ನು ಅರಿಯಲು ಅಂತರ್ಜಾಲ ಪೂರಕವಾಗುತ್ತದೆ. ಅಂತೆಯೇ, ಜಾಲತಾಣಗಳ ಮೂಲಕ ಸ್ನೇಹ–ನಂಬಿಕೆ ಗಳಿಸಿಕೊಂಡು ವಂಚಿಸುವವರೂ ಹಾಗೂ ಅಪರಾಧಗಳನ್ನು ಎಸಗುವವರೂ ಇದ್ದಾರೆ.

ವಿದ್ಯುನ್ಮಾನ ಮಾಧ್ಯಮಗಳು ಮುಕ್ತ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುತ್ತದೆ ಎನ್ನುವುದನ್ನು ಒಪ್ಪಿಕೊಳ್ಳುವುದರ ಜೊತೆಗೆ, ವ್ಯಸನವಾಗಿ ಪರಿಣಮಿಸಿದರೆ ಇವುಗಳು ನಮ್ಮ ಸ್ವಾತಂತ್ರ್ಯವನ್ನು ಕಸಿಯುತ್ತವೆ ಎನ್ನುವುದನ್ನು ಕೂಡ ನೆನಪಿನಲ್ಲಿಟ್ಟುಕೊಳ್ಳಬೇಕು. ಸ್ವಾತಂತ್ರ್ಯದ ಹರಣ ಎಂದರೆ ಅದು 'ಗುಲಾಮಿತನ' ಅಲ್ಲದೆ ಬೇರೇನೂ ಅಲ್ಲ. ಈ ಹಿನ್ನೆಲೆಯಲ್ಲಿಯೇ, ಗ್ಯಾಜೆಟ್‌ಗಳ ವ್ಯಸನಕ್ಕೆ ಸಿಕ್ಕಿದವರನ್ನು 'ಗ್ಯಾಜೆಟ್‌ಗಳ ಗುಲಾಮರು' ಎಂದು ಕರೆಯುವ ವಿಶ್ಲೇಷಣೆಗಳು ಹುಟ್ಟಿಕೊಂಡಿವೆ.

